ಫ್ಯಾಕ್ಸ್/Fax : 080-25586321
ಈಮೇಲ್/E-mail : ho@kspcb.gov.in
ವೆಬ್‌ಸೈಟ್/Website : http://kspcb.gov.in

25581383, 25589112
25588151, 25588270
25588142, 25586520

# ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
# Karnataka State Pollution Control Board

"ಪರಿಸರ ಭವನ", 1 ರಿಂದ 5ನೇ ಮಹಡಿಗಳು, ನಂ. 49, ಚರ್ಚ್ ಸ್ಟ್ರೀಟ್, ಬೆಂಗಳೂರು - 560 001, ಕರ್ನಾಟಕ, ಭಾರತ
"Parisara Bhavana", 1st to 5th Floor, # 49, Church Street, Bengaluru - 560 001, Karnataka, INDIA

ಸಂ:ಮಾನಿಮಂ/40/ಹವಿ/2017-18/ 2005 ದಿನಾಂಕ: 24 OCT 2017

ಜ್ಞಾಪನ ಪತ್ರ

ವಿಷಯ: ಮಂಡಳಿಯ ಬ್ಯಾಂಕ್ ಖಾತೆ ಸಂಖ್ಯೆಗಳು ಬದಲಾಗಿರುವ ವಿವರಗಳನ್ನು ನೀಡುವ ಬಗ್ಗೆ.

*****

ಕಾರ್ಖಾನೆ, ವ್ಯಕ್ತಿ ಅಥವಾ ಸಂಸ್ಥೆಯವರು ಮಂಡಳಿಗೆ ಸಮ್ಮತಿ ಹಾಗೂ ವಿಶ್ಲೇಷಣಾ ಶುಲ್ಕವನ್ನು NEFT ಹಾಗೂ RTGS ಮೂಲಕ ಈ ಕೆಳಕಂಡ ಮಂಡಳಿಯ ಕಾರ್ಪೋರೇಷನ್ ಬ್ಯಾಂಕ್ ಖಾತೆಗಳ ಸಂಖ್ಯೆಗೆ ಜಮೆ ಮಾಡಲು ಈ ಹಿಂದೆ ನಿರ್ದೇಶನ ನೀಡಲಾಗಿತ್ತು. ಪ್ರಸ್ತುತ ಕಾರ್ಪೋರೇಷನ್ ಬ್ಯಾಂಕ್‌ನಲ್ಲಿನ ಮಂಡಳಿಯ ಖಾತೆಗಳಿಗೆ ಹೊಸ ಬ್ಯಾಂಕ್ ಖಾತೆ ಸಂಖ್ಯೆಗಳನ್ನು ನೀಡಿರುವುದರಿಂದ ಇನ್ನು ಮುಂದೆ ಬದಲಾಗಿರುವ ಹೊಸ ಖಾತೆ ಸಂಖ್ಯೆಗಳಿಗೆ ಜಮೆ ಮಾಡುವಂತೆ ಸೂಚಿಸಲಾಗಿದೆ.

ಕಾರ್ಪೋರೇಷನ್ ಬ್ಯಾಂಕ್‌ನ ಬದಲಾಗಿರುವ ಖಾತೆ ಸಂಖ್ಯೆಗಳು ಈ ಕೆಳಗಿನಂತಿವೆ.

| ಕ್ರ.ಸಂ. | ಕಾರ್ಪೋರೇಷನ್ ಬ್ಯಾಂಕ್‌ನಲ್ಲಿದ್ದ ಹಳೆ ಖಾತೆ ಸಂಖ್ಯೆಗಳು | ಬದಲಾಗಿರುವ ಕಾರ್ಪೋರೇಷನ್ ಬ್ಯಾಂಕ್‌ನ ಹೊಸ ಖಾತೆ ಸಂಖ್ಯೆಗಳು | ರಾಜಸ್ವ (Revenue) ಮತ್ತು ಶುಲ್ಕ ಸಂಗ್ರಹಣೆ ಸ್ವರೂಪ |
|---|---|---|---|
| 01. | 034101601000374 | 510101005677504 | ಸಮ್ಮತಿ ಶುಲ್ಕ (Consent Fees) |
| 02. | 034101601000375 | 510101005677512 | ಜಲ/ವಾಯು ಮಾದರಿಗಳ ವಿಶ್ಲೇಷಣಾ ಶುಲ್ಕ (Water/Air Analysis Fees) |
| 03. | 034100101026144 | 520101253867300 | ಜಲಕರ ಶುಲ್ಕ (Water cess) |

ಸಮ್ಮತಿ ಹಾಗೂ ವಿಶ್ಲೇಷಣಾ ಶುಲ್ಕಗಳಿಗೆ ಸಂಬಂಧಿಸಿದ ಜಮೆಗಳನ್ನು ಹಳೆ ಖಾತೆಗೆ ಜಮೆ ಮಾಡುವ ಬದಲು ಕಾರ್ಖಾನೆ, ವ್ಯಕ್ತಿ ಹಾಗೂ ಸಂಸ್ಥೆಗಳು ತಮ್ಮ ಬ್ಯಾಂಕ್ ಖಾತೆಯಿಂದ ಮೇಲೆ ತಿಳಿಸಿದ ಮಂಡಳಿಯ ಬದಲಾಗಿರುವ ಹೊಸ ಖಾತೆಗಳಿಗೆ ನೇರವಾಗಿ NEFT/RTGS ಮುಖಾಂತರ ಪಾವತಿಸಲು ಕ್ರಮ ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಇನ್ನು ಮುಂದೆ, ಸಮ್ಮತಿ ಶುಲ್ಕ, ವಿಶ್ಲೇಷಣಾ ಶುಲ್ಕ ಹಾಗೂ ಜಲಕರ ಶುಲ್ಕಗಳನ್ನು NEFT/RTGS ಮೂಲಕ ಕೇಂದ್ರ ಕಛೇರಿಯ ಬದಲಾಗಿರುವ ಮುಖ್ಯ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿರುವುದಕ್ಕೆ ಸಂಬಂಧಪಟ್ಟ ಪತ್ರಗಳನ್ನು ಮೇಲಿನ ಪ್ರಾಧಿಕಾರಿಗಳಿಂದ ಪಡೆದು ನಿರ್ವಹಿಸುತ್ತಿರುವ ವಹಿಗಳಲ್ಲಿ ದಾಖಲಿಸಲು ಸಹ ಸೂಚಿಸಿದೆ. (Consent Fee, Analysis Fees & Water Cess).

..2

ಮೇಲಿನ ಸಂಗ್ರಹಣೆಗಳಿಗೆ ವಿವರಗಳನ್ನು ಹದಿನೈದು ದಿನಗಳಿಗೊಮ್ಮೆ ಪ್ರತಿ ತಿಂಗಳು ಅಧೀನ ಕಛೇರಿಗಳ ಅಧಿಕಾರಿಗಳು ಕೇಂದ್ರ ಕಛೇರಿಯ ಲೆಕ್ಕ ಸಮನ್ವಯ ಕಾರ್ಯಕ್ಕೆ ಒದಗಿಸಲು ಸಹ ತಿಳಿಸಿದೆ. ಈ ಆದೇಶವನ್ನು ಎಲ್ಲಾ ಪ್ರಾದೇಶಿಕ/ಅಧೀನ ಕಛೇರಿಗಳ ಸೂಚನಾ ಫಲಕಗಳಲ್ಲಿ ಪ್ರದರ್ಶಿಸಿ, ಕೋರಿದವರಿಗೂ ಒಂದು ನಮೂನೆ ಪತ್ರವನ್ನು ನೀಡುವುದು.

ಮುಖ್ಯ ಹಣಕಾಸು ಅಧಿಕಾರಿ

ಗೆ,

1) ಎಲ್ಲಾ ಹಿರಿಯ ಪರಿಸರ ಅಧಿಕಾರಿಗಳು, ವಿಭಾಗೀಯ ಕಛೇರಿ.
2) ಎಲ್ಲಾ ಪ್ರಾದೇಶಿಕ ಅಧಿಕಾರಿಗಳು, ಪ್ರಾದೇಶಿಕ ಕಛೇರಿ.

ಪ್ರತಿಗಳು:

1) ಅಧ್ಯಕ್ಷರ ತಾಂತ್ರಿಕ ಅಧಿಕಾರಿಗಳ ಮಾಹಿತಿಗಾಗಿ ಹಾಗೂ ಮಾನ್ಯ ಅಧ್ಯಕ್ಷರ ಅವಗಾಹನೆಗೆ ಸಲ್ಲಿಸುವುದು.
2) ಮಾನ್ಯ ಸದಸ್ಯ ಕಾರ್ಯದರ್ಶಿಯವರ ಮಾಹಿತಿಗಾಗಿ
3) ಮುಖ್ಯ ಪರಿಸರ ಅಧಿಕಾರಿಗಳು, ಕೇಂದ್ರ ಕಛೇರಿ, ಇವರ ಮಾಹಿತಿಗಾಗಿ
4) ಎಲ್ಲಾ ಪರಿಸರ ಅಧಿಕಾರಿಗಳು, ಕೇಂದ್ರ ಕಛೇರಿ, ಇವರ ಮಾಹಿತಿಗಾಗಿ
5) ಆಡಳಿತ ಅಧಿಕಾರಿ, ಕೇಂದ್ರ ಕಛೇರಿ, ಇವರ ಮಾಹಿತಿಗಾಗಿ
6) ಎಲ್ಲಾ ಉಪ ಪರಿಸರ ಅಧಿಕಾರಿಗಳು, ಕೇಂದ್ರ ಕಛೇರಿ, ಇವರ ಮಾಹಿತಿಗಾಗಿ — 5th Floor
7) ಸಾರ್ವಜನಿಕ ಸಂಪರ್ಕ ಅಧಿಕಾರಿ, ಕೇಂದ್ರ ಕಛೇರಿ, ಇವರ ಮಾಹಿತಿಗಾಗಿ